೧
ರಿಯಲ್ ರೈಟಿಂಗ್ – ಗ್ರಹಾಂ ಪಾಮರ್, ರೋಜರ್ ಗೋವರ್ ಮತ್ತು ಸೈಮನ್ ಹೈನ್ಸ್

– ಸಲೋನಿ ಜೈನ್



ಲೇಖಕರು: ಗ್ರಹಾಂ ಪಾಮರ್, ರೋಜರ್ ಗೋವರ್ ಮತ್ತು ಸೈಮನ್ ಹೈನ್ಸ್
ವರ್ಷ: 2008
ಪ್ರಕಟನೆ: ನ್ಯೂ ದಿಲ್ಲಿ: ಕೇಂಬ್ರಿಜ್ ಯೂನಿವರ್ಸಿಟಿ ಪ್ರೆಸ್
ಐಎಸ್‌ಬಿಎನ್: 13 978–0–521–15205–1

Real Writing by Graham Palmer, Roger Gower and Simon Haines

ಪುಸ್ತಕ: ರಿಯಲ್ ರೈಟಿಂಗ್.

ಸಾರಾಂಶ: ೨೦೦೮ರಲ್ಲಿ ಪ್ರಕಟಗೊಂಡ ಗ್ರಹಾಂ ಪಾಮರ್ ಮತ್ತು ಇತರರ ರಿಯಲ್ ರೈಟಿಂಗ್ ಎಂಬ ಬರವಣಿಗೆಯ ಒಂದು ವ್ಯಾಸಂಗ ಸರಣಿಯನ್ನು ಇಲ್ಲಿ ಪರಿಚಯಿಸಲಾಗಿದೆ. ಕಲಿಕಾರ್ಥಿಗಳು ಇಂಗ್ಲೀಷ್

ಭಾಷೆಯನ್ನೇ ಪ್ರಧಾನವಾಗಿ ಮಾತನಾಡುವ ದೇಶಗಳಿಗೆ ಭೇಟಿ ನೀಡುವಾಗ, ಅಥವಾ ಅಲ್ಲಿಯೇ ಬಹಳ ದಿನಗಳವರೆಗೆ ವಾಸಿಸುವಂತಹ ಸಂದರ್ಭವಿದ್ದರೆ ಆಗ ಅಲ್ಲಿ ದಿನನಿತ್ಯದ ಬರವಣಿಗೆ ಮಾಡುವಾಗ ಎದುರಾಗುವ ವೈವಿಧ್ಯಮಯ ಸನ್ನಿವೇಶಗಳು ಮತ್ತು ಅದಕ್ಕೆ ತಕ್ಕ ಬರವಣಿಗೆಗಳನ್ನು, ಅಂದರೆ ಅಲ್ಲಿ ಪ್ರಾಯೋಗಿಕವಾಗಿ ಉಪಯುಕ್ತವಾಗುವ ರೀತಿಯ ಬರವಣಿಗೆಗಳನ್ನು ರೂಢಿಸಿಕೊಳ್ಳಲು ಈ ಪುಸ್ತಕ ಸರಣಿಯು ಸಹಾಯ ಮಾಡುತ್ತದೆ.

ಪ್ರಮುಖ ಪದಗಳು: ವ್ಯವಹಾರಿಕ ಬರವಣಿಗೆ–real Writing, ಬರವಣಿಗೆಯ ಶೈಲಿ, ಔಪಚಾರಿಕ ಮತ್ತು ಅನೌಪಚಾರಿಕ ಬರವಣಿಗೆ– formal and informal writing.

ವ್ಯವಹಾರಿಕ ಬರವಣಿಗೆಯು ಇಂಗ್ಲಿಷ್ ಮಾತನಾಡುವ ದೇಶಗಳಲ್ಲಿ ವಾಸಿಸುತ್ತಿರುವ ಅಥವಾ ಅಲ್ಲಿಗೆ ಭೇಟಿ ನೀಡುವ ಯುವ ಮತ್ತು ವಯಸ್ಕ ಕಲಿಕಾರ್ಥಿಗಳಿಗೆ ದೈನಿಕ ವ್ಯವಹಾರಕ್ಕೆ ಅಗತ್ಯವಾದ ಬರವಣಿಗೆಯನ್ನು ಕಲಿಸಲು ಇರುವ ಒಂದು ಬಹುಹಂತ ಬರವಣಿಗೆಯ ವ್ಯಾಸಂಗ ಸರಣಿಯಾಗಿದೆ. ಬರೆಯುವುದನ್ನು ಕಲಿಯುವಾಗ ಕಲಿಕಾರ್ಥಿಯ ಸ್ವಾತಂತ್ರ್ಯವು ಮುಖ್ಯ ಕೇಂದ್ರವಾಗುವ ರೀತಿಯಲ್ಲಿ ಈ ಪುಸ್ತಕವು ಓದು, ಬರವಣಿಗೆ ಮತ್ತು ಆಲಿಸುವಿಕೆಯ ಪ್ರಕ್ರಿಯೆಗಳನ್ನು ಒಗ್ಗೂಡಿಸಿಕೊಂಡು ಸಂಯೋಜಿಸಲ್ಪಟ್ಟಿದೆ. ಈ ಪುಸ್ತಕದ ಉದ್ದೇಶವು ಕಲಿಕಾರ್ಥಿಗಳ ಆತ್ಮವಿಶ್ವಾಸವನ್ನು ಹೆಚ್ಚಿಸುವುದಾಗಿದೆ ಮತ್ತು ಬೇರೆ ಬೇರೆ ಶೈಲಿಗಳ ಬರವಣಿಗೆಯನ್ನು ಅವರು ತಮ್ಮ ತೆಕ್ಕೆಗೆ ತೆಗೆದುಕೊಳ್ಳುವಂತೆ ಮಾಡುವುದಾಗಿದೆ.

ಈ ಸಂಪುಟವು ಪ್ರಾಥಮಿಕ ಹಂತದಿಂದ ಹಿಡಿದು ಪ್ರೌಢ/ಉನ್ನತ (advanced) ಹಂತದವರೆಗಿನ ನಾಲ್ಕು ಪುಸ್ತಕಗಳನ್ನು ಒಳಗೊಂಡಿದೆ. ಪ್ರತಿ ಪುಸ್ತಕದಲ್ಲೂ ಹದಿನಾರು ಘಟಕಗಳಿವೆ ಮತ್ತು ಔಪಚಾರಿಕ ಅಥವಾ ಅನೌಪಚಾರಿಕ ಬರವಣಿಗೆಗಳನ್ನು ಒಳಗೊಂಡ ಎರಡು ವಿಭಾಗಗಳಿವೆ. ೧ರಿಂದ ೫ರ ವರೆಗಿನ ಘಟಕಗಳು ಸಾಮಾಜಿಕ ಸನ್ನಿವೇಶಗಳು ಮತ್ತು ಪ್ರವಾಸ ಕೈಗೊಂಡಾಗಿನ ಸನ್ನಿವೇಶಗಳನ್ನು ಕೇಂದ್ರವಾಗಿಸಿಕೊಂಡರೆ, ೬ರಿಂದ ೧೬ರ ವರೆಗಿನ ಘಟಕಗಳು ಕೆಲಸ ಮತ್ತು ವ್ಯಾಸಂಗದ ಸನ್ನಿವೇಶಗಳನ್ನು ಕೇಂದ್ರವಾಗಿಟ್ಟುಕೊಂಡಿವೆ. ಒಂದನೆಯ ಪುಸ್ತಕವು, ಬಿಟ್ಟ ಸ್ಥಳ ತುಂಬುವ ಬರವಣಿಗೆ ಅಥವಾ ಸಂಕ್ಷಿಪ್ತ ಸಂದೇಶಗಳನ್ನು ಬರೆಯುವಂತಹ ಸರಳ ಅಭ್ಯಾಸಗಳನ್ನೊಳಗೊಂಡ ಪ್ರಾಥಮಿಕ ಹಂತದ ಬರವಣಿಗೆಯ ಪುಸ್ತಕವಾಗಿದೆ. ಎರಡನೆಯ ಪುಸ್ತಕವು, ಪೂರ್ವ–ಮಾಧ್ಯಮಿಕ ಹಂತದ್ದಾಗಿದ್ದು ಬರವಣಿಗೆಯಲ್ಲಿ ಸ್ವಲ್ಪ ಜ್ಞಾನ ಇದ್ದವರಿಗಾಗಿ ಇರುವ ಪುಸ್ತಕವಾಗಿದೆ ಮತ್ತು ಇನ್ನೂ ಮೇಲಿನ ಮಟ್ಟದ ಅಭ್ಯಾಸಗಳು, ಅಂದರೆ ವಿಚಾರಮಂಡನೆ ಮಾಡುವುದು ಮತ್ತು ಪ್ರಕ್ರಿಯೆಗಳ

ವಿವರಣೆಯಂತಹ ಅಭ್ಯಾಸಗಳನ್ನು ಪರಿಚಯಿಸುತ್ತ ಅವರನ್ನು ಮುಂದಿನ ಹಂತಕ್ಕೆ ಒಯ್ಯುತ್ತದೆ. ಮೂರನೆಯ ಪುಸ್ತಕವು ಮೇಲಿನ ಮಾಧ್ಯಮಿಕ ಹಂತದವರಿಗಾಗಿ ಇದೆ ಮತ್ತು ನಾಲ್ಕನೆಯ ಪುಸ್ತಕವು ಪ್ರೌಢ ಹಂತದ (advanced) ಕಲಿಕಾರ್ಥಿಗಳ ಸಲುವಾಗಿ, ಅಂದರೆ ವೃತ್ತಿಗೆ ಸಂಬಂಧಿಸಿದ ಒಂದು ಸ್ಪರ್ಧಾತ್ಮಕ ಪರಿಸರದಲ್ಲಿ ವ್ಯವಹರಿಸುವುದಾದರೆ ಅಂತಹ ಸನ್ನಿವೇಶಕ್ಕೆ ತಕ್ಕ ಪ್ರಾವೀಣ್ಯವನ್ನು ಪಡೆಯಲು ಬಯಸುವಂಥವರ ಸಲುವಾಗಿ ಇದೆ.

ಈಗಾಗಲೇ ಲಭ್ಯವಿರುವ ಪುಸ್ತಕಗಳಲ್ಲಿ ಈ ಪುಸ್ತಕವು ಮಾತ್ರ ಕಲಿಕಾರ್ಥಿಗಳಿಗೆ ಒಂದು ಪೃಥಕ್ಕರಿಸಿದ, ಆದರೆ ತೀರ ಸರಳೀಕೃತಗೊಳ್ಳದ ಕಲಿಕಾ ವಿನ್ಯಾಸವನ್ನು ಒದಗಿಸಿಕೊಡುತ್ತ ವಿಭಿನ್ನವೆನಿಸುತ್ತದೆ. ಪ್ರತಿಯೊಂದು ಘಟಕವೂ ಮೊದಲು ವಿಷಯಕ್ಕೊಂದು ಪ್ರವೇಶಿಕೆಯನ್ನು ಕೊಡುತ್ತದೆ, ಅಭ್ಯಾಸಕ್ಕೆಂದು ನೀಡಲಾದ ಪ್ರಶ್ನೆಗಳು ಮತ್ತು ಸ್ವ-ಮೌಲ್ಯಮಾಪನದ ತಾಳೆಪಟ್ಟಿಗಳೊಂದಿಗೆ (checklist) ಕಲಿಕಾರ್ಥಿಗಳು ಕೆಲಸ ಮಾಡಲು ಸಂಬಂಧಪಟ್ಟ ಎಲ್ಲ ಮಾಹಿತಿಗಳನ್ನು ಕೊಡುತ್ತದೆ. ಈ ಪುಸ್ತಕವು ಏಕಕಕಾಲಕ್ಕೆ ಆತನ/ಆಕೆಯ ಬರವಣಿಗೆಯ ಜ್ಞಾನವನ್ನು ಹೆಚ್ಚಿಸುವುದರೊಂದಿಗೆ ಕಲಿಕಾರ್ಥಿಗೆ ಹೊಸ ಸಂಸ್ಕೃತಿಗಳನ್ನೂ ಪರಿಚಯಿಸುತ್ತದೆ.

ಇಲ್ಲಿ ಕೊಡಲಾದ ವೈವಿಧ್ಯಮಯ ಅಭ್ಯಾಸಪಾಠಗಳು (exercises) ಕಲಿಕಾಭ್ಯಾಸವನ್ನು ನಡೆಸಲು ವಿಚಾರ ಮಂಥನ ಮಾಡುವ ಅಭ್ಯಾಸಪಾಠಗಳ ಮೂಲಕ ಬೇರೆಬೇರೆ ರೀತಿಯ ಬರವಣಿಗೆಗಳನ್ನು ನಮ್ಮ ಮುಂದಿಡುತ್ತವೆ. ಪ್ರತಿಯೊಂದೂ ಘಟಕದಲ್ಲಿರುವ ಅಭ್ಯಾಸಪಾಠಗಳು- ಬರವಣಿಗೆಯ ಕೆಲಸದ ಯೋಜನೆ ತಯಾರಿಸುವುದು, ಸುಸಂಬದ್ಧವಾಗಿ ಸಂಯೋಜಿಸುವುದು ಮತ್ತು ಆ ಕೆಲಸವು ಸರಿಯಾಗಿ ಆಗುತ್ತಿದೆಯೆ ಇಲ್ಲವೆ ಎಂಬುದನ್ನು ಪರೀಕ್ಷಿಸುವುದೇ ಮುಂತಾದ ಉಪಯುಕ್ತ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಕಲಿಕಾರ್ಥಿಗೆ ಸಹಾಯ ಮಾಡುತ್ತವೆ. ಪ್ರತಿಯೊಂದೂ ಘಟಕದ ಆರಂಭದಲ್ಲಿ 'ಬರೆಯಲು ಸಿದ್ಧರಾಗಿ' ಎಂಬಂತಹ ಬರವಣಿಗೆಯ ಒಂದು ಪೂರ್ವಭಾವಿ ಅಭ್ಯಾಸಪಾಠವಿದೆ, ಅದು ಓದುಗನಿಗೆ ಆ ಘಟಕದಲ್ಲಿ ಮುಂದಿಟ್ಟ ವಿಷಯವನ್ನು ಪರಿಚಯಿಸುತ್ತದೆ. ಅನಂತರ ಬರವಣಿಗೆಯ ರೂಢಿಗತ (ಸಾಂಪ್ರದಾಯಿಕ) ವಿಧಾನಗಳ ಕಲಿಕಾ ವ್ಯಾಪ್ತಿಯನ್ನು ನಿರೂಪಿಸಲು ಸರಳ ಅಭ್ಯಾಸಪಾಠಗಳಿವೆ ಮತ್ತು ಆ ಕೆಲಸವನ್ನು ಪೂರ್ಣಗೊಳಿಸಲು ಮೂಲಭೂತವಾಗಿ ಅವಶ್ಯವಿರುವ ಶಬ್ದಭಂಡಾರವೂ ಇದೆ. ಅದಷ್ಟೇ ಅಲ್ಲದೆ, ಆ ಪುಸ್ತಕದೊಳಗೆ ಯೋಜನೆಗಳ ಅಭ್ಯಾಸಪಾಠಗಳು, ಬರವಣಿಗೆಯ ಅಭ್ಯಾಸಪಾಠಗಳು,

'ನಿಮ್ಮ ಕೆಲಸವನ್ನು ಪರಿಶೀಲಿಸಿ' ತರಹದ ಅಭ್ಯಾಸ ಪಾಠಗಳು, ಕಲಿಕೆಗೆ ಸಲಹೆ, ತರಗತಿಯಲ್ಲಿ ಹೆಚ್ಚುವರಿ ಕೆಲಸಗಳು, ಅಂದರೆ ಗುಂಪಿನೊಂದಿಗೆ ಮತ್ತು ಸಹವರ್ತಿಗಳೊಂದಿಗೆ ಚಟುವಟಿಕೆ ನಡೆಸುವುದು, ಹೆಚ್ಚುವರಿ ಪ್ರಶ್ನೆಗಳು ಮತ್ತು 'ನೀವೂ ಮಾಡಬಹುದು' ಚಟುವಟಿಕೆಯ ತಾಳೆಪಟ್ಟಿ, ಇವೆಲ್ಲ ಈ ಪುಸ್ತಕದೊಳಗೆ ಕಂಡುಬರುತ್ತವೆ. ಇದು ಅರ್ಥಗ್ರಹಣವನ್ನು ವರ್ಧಿಸುವ ವರ್ಣಮಯ ವಿನ್ಯಾಸ ಮತ್ತು ಚಿತ್ರಗಳ ನೆರವಿನೊಂದಿಗೆ ಇಲ್ಲಿನ ಮಂಡನೆ ಮತ್ತು ಸಂಯೋಜನೆಗೆ ಹೆಚ್ಚಿನ ಸ್ಪಷ್ಟತೆಯನ್ನು ದೊರಕಿಸಿಕೊಡುತ್ತದೆ.

ಅಭ್ಯಾಸಪಾಠಗಳು ಕಲಿಕಾರ್ಥಿಗಳಿಗೆ ಸುಲಭಗ್ರಾಹ್ಯವಾಗುವ ರೀತಿಯಲ್ಲಿ ಕಲಿಸುವ ವಿಷಯವನ್ನು ಆಧರಿಸಿ ಇವೆ ಮತ್ತು ವಿಮರ್ಶಾತ್ಮಕ ತತ್ತ್ವಗಳನ್ನು ಆಧರಿಸಿ ಇವೆ. ಕಲಿಕಾರ್ಥಿಗಳಿಗೆ ಕಾಗುಣಿತ ದೋಷಗಳು ಮತ್ತು ತಪ್ಪುತಪ್ಪಾದ ಸಂರಚನೆಗಳು ಎದುರಾಗದಂತೆ ಅತೀವ ಎಚ್ಚರಿಕೆ ವಹಿಸಲಾಗಿದೆ. ಸೂಕ್ಷ್ಮವಾಗಿ ಗಮನಿಸಿದರೆ, ಈ ಅಭ್ಯಾಸಪಾಠಗಳಿಗೆ ಬರವಣಿಗೆಯೆಂದರೆ ಬರಹಗಾರ ಮತ್ತು ಓದುಗನ ನಡುವೆ ನಡೆಯುವ ಒಂದು ಪರಸ್ಪರ ಕೊಳ್ಕೊಡೆ ಇರುವ ಪ್ರಕ್ರಿಯೆಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದು.

ಇದೊಂದು ಅಚ್ಚುಕಟ್ಟಾಗಿ ಬರೆಯಲ್ಪಟ್ಟ, ಸಂಪನ್ಮೂಲಗಳನ್ನು ಒದಗಿಸುವ, ಉತ್ತೇಜನ ನೀಡುವ ಮತ್ತು ಸಮರ್ಪಕವಾಗಿ ಸಂಯೋಜಿಸಲ್ಪಟ್ಟ ಪಠ್ಯವಾಗಿದೆ. ಇದರಲ್ಲಿ ಬಳಸಲಾದ ಭಾಷೆಯೂ ಸರಳವಾಗಿದ್ದು ಅರ್ಥ ಮಾಡಿಕೊಳ್ಳಲು ಸುಲಭವಾಗಿರುವುದರಿಂದ ಈ ಪುಸ್ತಕವು ವಿದ್ಯಾರ್ಥಿಗಳ ಆಸಕ್ತಿಯನ್ನು ಕಾಯ್ದುಕೊಂಡು ಬರುತ್ತದೆ.

ಈ ಅಭ್ಯಾಸಪಾಠಗಳಷ್ಟೇ ಅಲ್ಲದೆ ಈ ಪುಸ್ತಕವು ಅನುಬಂಧಗಳನ್ನು, ಉತ್ತರಗಳ ಕೀಗಳನ್ನು, ಧ್ವನಿಮುದ್ರಿತ ಪಠ್ಯವನ್ನು ಮತ್ತು ಒಂದು ಸಿಡಿಯನ್ನೂ ಒಳಗೊಂಡಿದೆ. ಹೀಗೆ ಓದುಗನು ಸ್ವ–ಅಧ್ಯಯನಕ್ಕೆ ಅಗತ್ಯವಿರುವ ಎಲ್ಲವನ್ನೂ ಈ ಪುಸ್ತಕದಿಂದ ಪಡೆಯಬಹುದಾಗಿದೆ.

ಈ ವ್ಯಾಸಂಗ ಸರಣಿಯು ಅರ್ಜಿ ತುಂಬುವುದರಿಂದ ಹಿಡಿದು ನಿರೂಪಣೆಯವರೆಗೆ, ಮುಂದುವರಿದು ಅಂಕಿಅಂಶಗಳ ಪ್ರಾಯೋಗಿಕ ಬರವಣಿಗೆಯ ಎಲ್ಲ ಕ್ಷೇತ್ರಗಳನ್ನೂ ಒಳಗೊಂಡಿರುವಂತೆ ತೋರಿದರೂ, ಇದರಲ್ಲಿ ಅಭ್ಯಾಸ ಚಟುವಟಿಕೆಗಳ ಪುನರಾವರ್ತನೆ ಇದೆ; ಭಾಷಾ ನಿಖರತೆಯನ್ನು ಕಲಿಸುವ ವ್ಯಾಕರಣ ಕೇಂದ್ರಿತ ಅಭ್ಯಾಸಪಾಠಗಳ ಕೊರತೆಯಿದೆ. ಹಾಗಿದ್ದರೂ, ಈ ಪುಸ್ತಕವು ಅನೇಕ ರೀತಿಯಲ್ಲಿ ತನ್ನ ಉದ್ದೇಶಗಳನ್ನು ಸಾಧಿಸುತ್ತದೆ ಮತ್ತು ಇಂಗ್ಲಿಷಿನಲ್ಲಿ ಬರೆಯುವುದು

ಹೇಗೆ ಎಂಬುದರ ಬಗೆಗೆ ಯಾರಾದರೂ ಹುಡುಕುತ್ತಿದ್ದರೆ ಇದೊಂದು ಮಾರ್ಗದರ್ಶಿ ಸಾಧನೋಪಾಯವಾಗಿದೆ.

* * *

ಚಿಂತನಾತ್ಮಕ ಪ್ರಶ್ನೆಗಳು:

ಈ ಸರಣಿಗೆ 'ನಿಜವಾದ ಬರವಣಿಗೆ' ಎಂಬ ತಲೆಬರಹ ಕೊಡುವುದರ ಹಿಂದೆ ಏನಾದರೂ ಹಿನ್ನೆಲೆ ಇದೆಯೆ?

ಸಲೋನಿ ಜೈನ್: ಅವರು ದೆಹಲಿ ವಿಶ್ವವಿದ್ಯಾಲಯದ ಭಾಷಾಶಾಸ್ತ್ರ ವಿಭಾಗದಿಂದ ಭಾಷಾಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಇವರು ದೆಹಲಿ ವಿಶ್ವವಿದ್ಯಾಲಯದಲ್ಲಿ ಕಲಾ ವಿಭಾಗದ Equal Opportunity Cellನಲ್ಲಿ ಅತಿಥಿ ಉಪನ್ಯಾಸಕರಾಗಿದ್ದರು. ಪ್ರಸ್ತುತ ಇವರು ಕುಲಾಚಿ ಹಂಸರಾಜ್ ಮಾದರಿ ಶಾಲೆಯಲ್ಲಿ ಇಂಗ್ಲಿಷಿನ TGTಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. Saloni11s@yahoo.co.in

ಅನುವಾದ: ಪ್ರಜ್ಞಾ / **ಪರಿಶೀಲನೆ:** ಎಂ ಜಿ ಹೆಗಡೆ

ಮೂಲ: *Language and Language Teaching,* Volume 3 Number 1 Issue 5 January 2014.

❑